ನದಿಯ ಮೂಲ ನೂರಾರು ಮೈಲುಗಳ ವಿಸ್ತಾರದ ನಾಲ್ಕು ಸರೋವರಗಳು ಎಂದರೆ ಆಶ್ಚರ್ಯವಾಗುತ್ತದೆ. 58 ಮೈಲು ದೂರದ ಎರಿ (Erie) ಎಂಬ ಜಲಾಶಯದಿಂದ ಹೊರಟ ವಿಶಾಲವಾದ ನದಿ ನಯಾಗರದಲ್ಲಿ ಜಲಪಾತವಾಗಿ ಧುಮುಕುತ್ತದೆ. ತನ್ನ ಯಾತ್ರೆಯ ಕೊನೆ ಹಂತದಲ್ಲಿ ಕಿರುದ್ವೀಪಗಳ ಕಾರಣದಿಂದಾಗಿ ಕವಲುಗಳಾಗಿ ಒಡೆದು, ಮೂರು ಜಲಧಾರೆಗಳಾಗಿ ಕೆಳಗಿನ ಕಂದಕಕ್ಕೆ ಬೀಳುತ್ತದೆ.

ಎರಿ ಜಲಾಶಯವು, ಸುಪೀರಿಯರ್, ಮಿಚಿಗನ್ ಮತ್ತು ಹ್ಯುರಾನ್ ಎಂಬ ಇನ್ನೂ ಮೂರು ಸರೋವರಗಳ ಸಂಪರ್ಕದಲ್ಲಿದೆ. ಈ ನಾಲ್ಕು ಬೃಹತ್ ಸರೋವರಗಳು ಜಗತ್ತಿನ ಒಟ್ಟು ಸಿಹಿ ನೀರಿನ (fresh water) ಶೇ. 20ರಷ್ಟು ಭಾಗವನ್ನು ಹೊಂದಿವೆ ಎಂದರೆ ಈ ಜಲಾಶಯಗಳ ಗಾತ್ರವನ್ನು ಊಹಿಸಿಕೊಳ್ಳಿ. ನಯಾಗರ ಕಣಿವೆಗೆ ಬಿದ್ದ ಜಲರಾಶಿ ಪುನಃ ಹದಿನೈದು ಮೈಲು ನದಿಯಾಗಿ ಹರಿದು ಒಂಟಾರಿಯೊ ಎಂಬ ಇನ್ನೊಂದು ಸರೋವರವಾಗಿ ನಿಂತು ಕೊನೆಗೆ ಅಟ್ಲಾಂಟಿಕ್ ಸಾಗರ ಸೇರುತ್ತದೆ.

ದಕ್ಷಿಣ ಅಮೆರಿಕದ ಏಂಜಲ್ ಜಲಪಾತ ನಯಾಗರಕ್ಕಿಂತ ಎತ್ತರ. ಆಫ್ರಿಕಾ ಖಂಡದ ವಿಕ್ಟೋರಿಯಾ ಜಲಪಾತ ನಯಾಗರಕ್ಕಿಂತ ಹೆಚ್ಚು ವಿಸ್ತಾರದ್ದು. ಹಾಗಾದರೆ ನಯಾಗರದ ವಿಶೇಷ ಏನು?

## ಒಟ್ಟು ನೋಟದ ಅದ್ಭುತ

ಅಧಿಕ ಪ್ರಮಾಣದ ದಟ್ಟವಾದ ನೀರಿನ ರಭಸದ ಜಗಿತ, ರುದ್ರರಮಣೀಯ ಸೌಂದರ್ಯ ಎಂದೇ ಹೇಳಬಹುದು. ಹಾಲಿನ ಬೆಳ್ನೊರೆಯ ರಾಶಿಯಂತೆ ಅರೆಗಳಿಗೆಯೂ ಬಿಡುವು ಕೊಡದೆ ನಿರಂತರ ರಭಸದಿಂದ ಧುಮುಕುವ ಈ ಜಲವೈಭವವನ್ನು ಕಣ್ಣು ತುಂಬಿಕೊಳ್ಳುವುದೇ ಸೊಗಸಾದ ಅನುಭವ. ಪ್ರತಿ ಕ್ಷಣಕ್ಕೂ, 176 ಅಡಿ ಎತ್ತರದಿಂದ 3160 ಟನ್ ನೀರು ನಯಾಗರ ಜಲಪಾತದಲ್ಲಿ ಸೇರುತ್ತದೆ. ಮೂರು ಜಲಪಾತಗಳ ಮೇಲಿನ ನೋಟ, ಕೆಳಗಿನ ನೋಟ, ಒಂದೊಂದರ ಪಾರ್ಶ್ವ ನೋಟ, ಎಲ್ಲವುಗಳ ಒಟ್ಟು ನೋಟ – ಇದೆಲ್ಲವನ್ನೂ ಕಣ್ತುಂಬಿಕೊಳ್ಳಲು ಬೇಕಾದ ಅದ್ಭುತ ವ್ಯವಸ್ಥೆ ಇಲ್ಲಿದೆ.

ಜಲಪಾತಗಳ ವೀಕ್ಷಣೆಗೆ ಹತ್ತು ಹಲವು ಸೌಕರ್ಯಗಳು. ವೀಕ್ಷಣಾ ಗೋಪುರ, ಮೂರು ಕಡೆ ವಿಸ್ತಾ ಪಾಯಿಂಟ್‌ಗಳು, ಬೋಟ್ ಮೂಲಕ ಜಲಪಾತಗಳ ಬುಡಕ್ಕೆ ಹೋಗಲು ಮೇಯ್ಡ್ ಆಫ್ ಮಿಸ್ಟ್, ಮೆಟ್ಟಿಲು ಏರಿ ಇಳಿದು ಜಲಪಾತಕ್ಕೆ ತಲೆಯೊಡ್ಡಲು ಕೇವ್ ಆಫ್ ವಿಂಡ್ – ಈ ಎಲ್ಲ ತಾಣಗಳನ್ನು ಸಂಪರ್ಕಿಸಲು ಶಟಲ್ ಎಂಬ ವಾಹನ ವ್ಯವಸ್ಥೆ. 390 ಎಕರೆ ವಿಸ್ತಾರದ ಎರಡು ಮೈಲು ಉದ್ದದ ಗೋಟ್ ಐಲ್ಯಾಂಡ್‌ನ ಕೊನೆಯಲ್ಲಿದೆ ಟೆರಾಪಿನ್ ಪಾಯಿಂಟ್ ಹಾಗೂ ಕೇವ್ ಆಫ್ ವಿಂಡ್ ವೀಕ್ಷಣಾ ಸ್ಥಳಗಳು. ಸೇತುವೆ ದಾಟಿ ಮುಖ್ಯ ಭೂಭಾಗಕ್ಕೆ ಬಂದರೆ ಅಬ್ಸರ್ವೇಷನ್ ಟವರ್ ಹಾಗೂ ಮೇಯ್ಡ್ ಆಫ್ ಮಿಸ್ಟ್. ಇವಿಷ್ಟಕ್ಕೆ ಸಮಯ ಹೊಂದಿಸಿಕೊಂಡರೆ, ಜಲಪಾತದ ಎಲ್ಲ ನೋಟಗಳು ನಮಗೆ ದೊರೆತಂತೆ.

ಮೊದಲಿಗೆ, ಗೋಟ್ ಐಲ್ಯಾಂಡ್‌ನ ಮಾಹಿತಿ ಕೇಂದ್ರದ ಬಳಿ, ಜಲಪಾತ ನೋಡುತ್ತಿರುವ ಭಂಗಿಯಲ್ಲಿರುವ ಎಸಿ ಇಂಡಕ್ಷನ್ ಮೋಟಾರ್ ಆವಿಷ್ಕಾರಕ ನಿಕೋಲಾ ಟೆಸ್ಲಾ ಪ್ರತಿಮೆ ಸ್ಥಳಕ್ಕೆ ಹೋದೆವು.

ಕಿರುಸೇತುವೆ ದಾಟಿ ಲೂನಾ ಐಲ್ಯಾಂಡ್‌ಗೆ ಹೋದಾಗ ಬ್ರೈಡಲ್ ವೇಯ್ಲ್ ಫಾಲ್ಸ್ ಮತ್ತು ಅಮೆರಿಕನ್ ಫಾಲ್ಸ್‌ಗಳ ಸಮೀಪ ದರ್ಶನವಾಯಿತು. ಜಲಪಾತದಿಂದ ಧುಮುಕಿ, ಮೇಲಕ್ಕೆ ಜಿಗಿಯುವ ತುಂತುರು ಮಂಜಿನ ಹನಿಗಳ ಪ್ರೋಕ್ಷಣೆಯಾಯಿತು. ಮುಂದುವರಿದ ನಾವು ಗೋಟ್ ಐಲ್ಯಾಂಡ್‌ನ ಮತ್ತೊಂದು ಬದಿಯ ಟೆರಾಪಿನ್ ಪಾಯಿಂಟ್‌ಗೆ ತೆರಳಿ ವಿಶಾಲವಾಗಿ ನಿರ್ಮಿಸಿದ ಮೆಟ್ಟಿಲುಗಳನ್ನು ಇಳಿದು ಹಾರ್ಸ್ ಶೂ ಫಾಲ್ಸ್ ಸೌಂದರ್ಯ ಸವಿದೆವು. ನೀರಹನಿಗಳ ಮೋಡ ಆಕಾಶಕ್ಕೆ ನೆಗೆಯುತ್ತಿದ್ದವು. ಅರ್ಧ ಚಂದ್ರಾಕಾರದಲ್ಲಿ ಭೋರ್ಗರೆವ ಜಲಪಾತವನ್ನು ಕಂಡೆವು.

## ಜಲಪಾತಗಳ ಕಂದರಕ್ಕೆ ಪಯಣ

ನಮ್ಮ ಯೋಜಿತ ಕಾರ್ಯಕ್ರಮದ ಮುಂದಿನ ಸ್ಥಳ ಮೇಯ್ಡ್ ಆಫ್ ಮಿಸ್ಟ್. ಇದಕ್ಕೆ ಮುಖ್ಯ ಭೂಭಾಗದ ಪ್ರಾಸ್ಪೆಕ್ಟ್ ಪಾಯಿಂಟ್‌ಗೆ ಹೋಗಬೇಕು. ಇಲ್ಲಿಯ ಅಬ್ಸರ್ವೇಷನ್ ಟವರ್‌ಗೆ ಬಂದೆವು. ಈ ಟವರ್‌ನ ಆಕಾಶಕ್ಕೆ ಚಾಚಿದಂಥ ವೇದಿಕೆಯಿಂದ ಮೂರೂ ಜಲಪಾತಗಳ ದೃಶ್ಯಗಳು ಕಣ್ಣಿಗೆ ರಾಚುವಂತಿದ್ದವು. ಇಲ್ಲಿರುವ ಎಲಿವೇಟರ್



ಮೂಲಕ ಕೆಳಗಿನ ಪ್ರಪಾತಕ್ಕೆ ಇಳಿದು ಟನೆಲ್ ಮೂಲಕ ಗೋರ್ಜ್ ಸೇರಿದಾಗ ನಮಗೆಲ್ಲರಿಗೂ ನೀಲಿಬಣ್ಣದ ತೆಳು ರೈನ್‌ಕೋಟ್ ಕೊಟ್ಟರು. ಎಲ್ಲರೂ, ರೈನ್‌ಕೋಟ್‌ಧಾರಿಗಳಾದೆವು. ಇನ್ನು ನಮ್ಮದು ಜಲಪಾತಗಳ ಕಂದರಕ್ಕೆ ಪಯಣ; ಎರಡು ಅಂತಸ್ತಿನ ತೆರೆದ ಬೋಟ್‌ನಲ್ಲಿ.

500 ಜನರನ್ನು ಒಮ್ಮೆಗೇ ಹೊತ್ತೊಯ್ಯುವ ದೋಣಿಗಳು ಒಂದರ ನಂತರ ಒಂದು ಪಯಣಿಸುತ್ತಲೇ ಇದ್ದವು. ನಮ್ಮನ್ನು ಹೊತ್ತ ಬೋಟ್ ನಯಾಗರ ಗೋರ್ಜ್ ಮೂಲಕ ಮೂರೂ ಜಲಪಾತಗಳ ಬುಡಕ್ಕೆ, ಬಹಳ ಹತ್ತಿರಕ್ಕೆ ಕೊಂಡೊಯ್ಯುತ್ತಾ ಸಾಗಿತು. ಕೆನಡಿಯನ್ ಫಾಲ್ಸ್‌ಗೆ ಮುನ್ನುಗ್ಗುತ್ತಿದಂತೆ, ಜಲಪಾತದ ಗರ್ಭದೊಳಕ್ಕೇ ಹೋಗುತ್ತಿರುವಂತೆ ಭಾಸವಾಯಿತು.

ಕೆಲವರು ಭಯದಿಂದ, ಮತ್ತೆ ಕೆಲವರು ಉತ್ಸಾಹದಿಂದ ಚೀರಿದರು. ಹದಿನೈದು ನಿಮಿಷಗಳ ಈ ಪ್ರಯಾಣ ಎಲ್ಲರಿಗೂ ಮರೆಯಲಾರದ

